ಪಠಣ ಕುತೂಹಲ

ಎಂ.ಎಸ್. ಶ್ರೀರಾಮ್



ನಮ್ಮವರು–ಹೊರಗಿನವರು; ಆತ್ಮೀಯರು–ಇತರರು; ನಮ್ಮತ್ತ ಇರುವ ಬಹುಸಂಖ್ಯಾತರು – ಎದುರಿಗಿರುವ ಅಲ್ಪಸಂಖ್ಯಾತರು – ಹೀಗೆ ಬೈನರಿಗಳನ್ನು ಪೋಷಿಸುವ ಪಾತ್ರವನ್ನು 'ಗುರುತುಗಳು' ಮಾಡುತ್ತದೆ. ಇದರಲ್ಲಿ ಮುಖ್ಯವಾದ ಕೆಲಸ – ವಿರೋಧಿಗಳನ್ನು ಶತ್ರುಗಳಾಗಿ ಬಣ್ಣಿಸಿ ಅವರನ್ನು ಗುರುತಿಸುವುದು ಮತ್ತು ಆ ಗುರುತಿಗೆ ಒಂದು ಹೆಸರನ್ನು ನೀಡುವುದು.

# ಗುರುತಿನ ಯೋಜನೆ

2002ರ ಅಹಮದಾಬಾದಿನಲ್ಲಿ ನಡೆದ ಕೋಮು ಗಲಭೆಯಲ್ಲಿ ಹೆಚ್ಚು ನಷ್ಟ ತಟ್ಟಿದ್ದು ಕೇವಲ ಒಂದು ಕೋಮಿನ ಜನರಿಗೆ. ನಾನು ಕೆಲಸ ಮಾಡುತ್ತಿದ್ದ 'ಐಐಎಂ' ಬಳಿಯ ಪಂಜರಾಪೋಲ್ ಚಾರ್ ರಾಸ್ತಾದಲ್ಲಿ ಧ್ವಂಸಗೊಂಡ ಅಂಗಡಿಗಳು 'ಅಭಿಲಾಷಾ ವೆಜ್ ರೆಸ್ಟುರಾ' ಮತ್ತು 'ಟೊಪಾಜ್'. ಏನೂ ಆಗದೇ ಉಳಿದವು 'ಮಂಗಳಸೂತ್ರ' ಎನ್ನುವ ಚಿನ್ನಾಭರಣದ ಅಂಗಡಿ ಮತ್ತು 'ವೈಭವ್' ಎನ್ನುವ ದಕ್ಷಿಣ ಭಾರತದ ರೆಸ್ಟುರಾ. ಈ ನಾಲ್ಕೂ ಒಂದೇ ಕಟ್ಟಡದಲ್ಲಿದ್ದುವು. ನಾಶವಾದವು ಒಂದು ಕೋಮಿಗೂ, ಉಳಿದವು ಮತ್ತೊಂದು ಕೋಮಿಗೂ ಸೇರಿದ್ದವು. ಇದರ ಬಗ್ಗೆ ಮಾಹಿತಿಯಿಲ್ಲದೇ ಹೀಗೆ ಗುರಿಯಿಟ್ಟು ಹಲ್ಲೆ ಮಾಡುವುದು ಆಗದ ಮಾತು. ಅದಕ್ಕಾಗಿಯೇ ಯಾವುದೇ ಗುರುತು ಮತ್ತು ಅದಕ್ಕೆ ಸಂಬಂಧಿಸಿದ ಮಾಹಿತಿ ಒಂದೇ ಕೇಂದ್ರದಲ್ಲಿ ಉಳಿದರೆ ಅಪಾಯಕಾರಿಯಾಗುತ್ತದೆ. ಕಾನೂನಿನಲ್ಲಿ ಅದರ ದುರ್ಬಳಕೆಯ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲು ಕಲಮುಗಳಿರಬಹುದಾದರೂ, ಕೇಂದ್ರೀಕೃತವಾದ ಮಾಹಿತಿಯು ದುರುಪಯೋಗಕ್ಕೆ ಒಳಗಾಗುವ ಸಾಧ್ಯತೆಯನ್ನು ಅಲ್ಲಗಳೆಯಲಾಗುವುದಿಲ್ಲ. ಅದಕ್ಕೆ ಸರ್ಕಾರದ ಬೆಂಬಲವೂ ಇದ್ದರೆ ಅದು ಬೇರೆಯೇ ಮಾತು. ಕೇಂದ್ರೀಕೃತ ಮಾಹಿತಿಯ ಸಂಗ್ರಹ ಅಪಾಯಕಾರಿಯಾದದ್ದೂ, ಪ್ರಜಾಪ್ರಭುತ್ವ ವಿರೋಧಿಯೂ ಎಂದು ಸೂಕ್ಷ್ಮವಾಗಿ ರಾಹುಲ್ ಭಾಟಿಯಾ ತಮ್ಮ ಪುಸ್ತಕ 'ಐಡೆಂಟಿಟಿ ಪ್ರಾಜೆಕ್ಟ್'ನಲ್ಲಿ ವಾದಿಸುತ್ತಾರೆ.

ಪುಸ್ತಕವನ್ನು ಭಾಟಿಯಾ ಸೂಕ್ಷ್ಮವಾಗಿ, ಆಸಕ್ತಿಕರವಾಗಿ ಕಟ್ಟುತ್ತಾರೆ. ಯಾವುದನ್ನೂ ಬಹಿರಂಗವಾಗಿ ಟೀಕಿಸದೇ, ಕಥೆಯನ್ನು ಹೆಣೆಯುತ್ತಾ ಹೋಗುತ್ತಾರೆ. ಆ ಕಥೆಯ ಭಿನ್ನ ಅಧ್ಯಾಯಗಳು ಒಂದಕ್ಕೊಂದು ಕೊಂಡಿಯಿಲ್ಲದ ಬಿಂದುಗಳಂತೆ ಸ್ವತಂತ್ರವಾಗಿ ನಿಂತಿವೆ. ಆದರೆ ಅವುಗಳನ್ನು ಒಟ್ಟಿಗೆ ಓದಿದಾಗ ಒಂದು ಸೂತ್ರ ಸಿಕ್ಕು ಬಿಂದುಗಳು ಮಾಲೆಯಾಗುತ್ತದೆ. ಈ ಮಾಲೆ ಭಿನ್ನವಾದ ಸಮಗ್ರ ಅರ್ಥವನ್ನು ಸ್ಫುರಿಸುತ್ತದೆ. ಅಂಕಿಅಂಶಗಳ